NAME OF THE NEWS PAPER: ವಿಶ್ವವಾಣಿ  ದಿನಾಂಕ : DATE 10/4/21

16

# ಮುಷ್ಕರ ನಿಷೇಧಿಸಿದ ಸರಕಾರ

## ಮೂರನೇ ದಿನವೂ ತಪ್ಪಲಿಲ್ಲ ಪ್ರಯಾಣಿಕರ ಪರದಾಟ

## ಏ.12ಕ್ಕೆ ಕುಟುಂಬಸ್ಥರ ಜತೆ ಸೇರಿ ಉಪವಾಸ ಸತ್ಯಾಗ್ರಹ

10/4/21

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಸಾರಿಗೆ ನೌಕರರ ಮುಷ್ಕರ ಮೂರನೇ ದಿನವೂ ಮುಂದುವರಿದಿದ್ದರೂ, ಖಾಸಗಿ ಬಸ್‌ಗಳೊಂದಿಗೆ ಅಲ್ಲಲ್ಲಿ ಸರಕಾರಿ ಬಸ್‌ಗಳು ಕಾರ್ಯಾಚರಣೆ ಮಾಡಿದ್ದರಿಂದ ಪ್ರಯಾಣಿಕರ ಪರದಾಟ ಕಡಿಮೆಯಾಗಿತ್ತು.

- ನಾಲ್ಕು ನಿಗಮಗಳಿಗೆ ಮುಷ್ಕರ ನಡೆಸದಂತೆ ಆದೇಶ
- ಮಾತುಕತೆ ನಡುವೆ ಮುಷ್ಕರ ತರವಲ್ಲ ಎಂದು ಎಚ್ಚರಿಕೆ

ರಾಜಧಾನಿ ಬೆಂಗಳೂರಿನಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಖಾಸಗಿ ಬಸ್‌ಗಳನ್ನು ಓಡಿಸಲು ಅನುಮತಿ ನೀಡಿದ್ದು, ಜನರು ತಮ್ಮ ಕೆಲಸಕ್ಕೆ ಹಾಗೂ ತಲುಪಬೇಕಾದ ಸ್ಥಳಕ್ಕೆ ತಲುಪಲು ಖಾಸಗಿ ಬಸ್‌ಗಳನ್ನೇ ಅವಲಂಬಿಸುತ್ತಿದ್ದಾರೆ. ಜತೆಗೆ ಬಿಎಂಟಿಸಿ ಸೇವೆ ಇಲ್ಲದಿದ್ದರಿಂದ ಜನ ಆಟೋ ಟ್ಯಾಕ್ಸಿ, ಟೆಂಪೋಗಳ ಮೂಲಕ ದುಪ್ಪಟ್ಟು ಹಣ ತೆತ್ತು ಸಂಚರಿಸುತ್ತಿದ್ದರು. ಸಾಲು ಸಾಲು ರಜೆ ಇರುವುದರಿಂದ ಊರಿಗೆ ತೆರಳುವವರಿಗೆಂದು ಸರಕಾರಿ ಬಸ್‌ಗಳು ಇಲ್ಲದಿದ್ದರಿಂದ ಖಾಸಗಿ ಬಸ್ ಅನ್ನು ಅವಲಂಬಿಸಿದ್ದು, ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಪೈಪೋಟಿಗೆ ಬಿದ್ದಂತೆ ಆಟೋ, ಮಿನಿಬಸ್, ಟೆಂಪೋಗಳು ಕಾರ್ಯಾಚರಣೆಗೆ ಇಳಿದಿದ್ದವು.

ಮುಷ್ಕರದ ನಡುವೆಯೂ ಹಲವಾರು ಬಿಎಂಟಿಸಿ, ಕೆಎಸ್ಆರ್ ಸಿಬ್ಬಂದಿ ಪೊಲೀಸ್ ರಕ್ಷಣೆಯಲ್ಲಿ ಬಸ್ ಕಾರ್ಯಾಚರಣೆ ನಡೆಸಿದ್ದು, ನಗರದಲ್ಲಿ 150ಕ್ಕೂ ಹೆಚ್ಚಿನ ಬಿಎಂಟಿಸಿ ಬಸ್‌ಗಳು ವಿವಿಧ ಮಾರ್ಗಗಳಲ್ಲಿ ಸಂಚರಿಸಿದರೆ ಅನೇಕ ಕಡೆಗಳಲ್ಲಿ ಕೆಎಸ್ಆರ್‌ಟಿಸಿ ಬಸ್‌ಗಳು ಸಂಚರಿಸಿವೆ. ಹಲವು ಕಡೆಗಳಲ್ಲಿ ಬಸ್ ಸಂಚರಿಸಿವೆಯಾದರೂ ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು.

→ 11



**ಸಂಚಾರ ನಡೆಸಿದ ಬಸ್‌ಗಳು**

**286** ಕೆಎಸ್ಆರ್‌ಟಿಸಿ

**100** ಬಿಎಂಟಿಸಿ

**191** ಎನ್‌ಇಕೆಆರ್‌ಟಿಸಿ

**96** ಎನ್‌ಡಬ್ಲ್ಯುಕೆಆರ್‌ಟಿಸಿ

**673** ಒಟ್ಟು

**120** ನೌಕರರು ವಜಾ

### ಮುಷ್ಕರ ನಡೆಸದಂತೆ ಕಾನೂನಾತ್ಮಕ ನಿಷೇಧ

ಸಾರಿಗೆ ನೌಕರರ ಮುಷ್ಕರಕ್ಕೆ ಸೆಡ್ಡು ಹೊಡೆದಿರುವ ಸರಕಾರ ಮುಷ್ಕರ ನಡೆದಸಂತೆ ನಿಷೇಧ ಹೊರಡಿಸಿದೆ. ಸಾರಿಗೆಯನ್ನು ಸಾರ್ವಜನಿಕ ಉಪಯುಕ್ತ ಸೇವೆ ಎಂದು ಪರಿಗಣನೆ ಮಾಡಿ, ಮುಷ್ಕರವನ್ನು ನಿಷೇದಿಸಿ ನಾಲ್ಕು ನಿಗಮಗಳಿಗೆ ಸೂಚನೆ ನೀಡಿದೆ. ತಕ್ಷಣವೇ ಜಾರಿಗೆ ಬರುವಂತೆ ನಿಷೇಧದ ಆದೇಶ ಹೊರಡಿಸಲಾಗಿದೆ. ಸಂಧಾನ ಪ್ರಕ್ರಿಯೆ ಚಾಲ್ತಿಯಲ್ಲಿರುವಾಗ ಮುಷ್ಕರ ಮಾಡುವಂತಿಲ್ಲ ಎಂಬ ಅಂಶವನ್ನು ಉಲ್ಲೇಖಿಸಿ, ಕೈಗಾರಿಗಾ ವಿವಾಧ ಕಾಯ್ದೆ 1947ರ 10 ಡಿ ಕಲಂ ಅಡಿ ಮುಷ್ಕರ ನಿಷೇದದ ಆದೇಶವನ್ನು ಹೊರಡಿಸಿದೆ. ಸಾರಿಗೆ ನೌಕರರ ಮುಷ್ಕರ ವಿವಾದವನ್ನು ನ್ಯಾಯಾಧಿಕರಣಕ್ಕೆ ಕಳುಹಿಸುವ ನಿರ್ಧಾರವನ್ನು ಸರಕಾರ ತೆಗೆದುಕೊಂಡಿರುವುದು ಸಾರಿಗೆ ನೌಕರರ ಮುಷ್ಕರ ಮತ್ತಷ್ಟು ಕಗ್ಗಂಟಾಗುವಂತೆ ಮಾಡಿದೆ.



ಸಾರಿಗೆ ಮುಷ್ಕರ ಸಂಬಂಧ ಇನ್ನು ಮಾತನಾಡುವ ಪ್ರಶ್ನೆಯೇ ಇಲ್ಲ. ಈಗಾಗಲೇ 8 ಬೇಡಿಕೆ ಈಡೇರಿಸಿದರೂ ಸುಖಾಸುಮ್ಮನೆ ಸತ್ಯಾಗ್ರಹ ಮಾಡಲಾಗುತ್ತಿದೆ. ಇವತ್ತಿನಿಂದ ಚುನಾವಣಾ ಪ್ರಚಾರಕ್ಕೆ ಪ್ರವಾಸ ಹೋಗುತ್ತಿದ್ದೇನೆ. ಇದರ ಮೇಲೆ ಅವರ ಖುಷಿ, ಏನ್ ಅನ್ನಿಸುತ್ತದೆಯೋ ಹಾಗೇ ಮಾಡಲಿ.

**- ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿ

# ಹೆಚ್ಚುವರಿ ಸೌಲಭ್ಯವಿದ್ದರೂ ಸಾರಥಿಗಳ ಹಠವೇಕೆ?

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಸರಕಾರಿ ನೌಕರರಿಗಿಂತಲೂ ಹೆಚ್ಚು ಸೌಲಭ್ಯ ನೀಡುತ್ತಿದ್ದರೂ ಆರನೇ ವೇತನ ಆಯೋಗ ಜಾರಿ ಮಾಡಲು ಒತ್ತಾಯಿಸುತ್ತಿರುವ ಸಾರಥಿಗಳ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಚರ್ಚೆ ನಡೆಯುತ್ತಿದೆ. ಎಲ್ಲಾ ಸೌಲಭ್ಯಗಳನ್ನು ನೀಡಿದ್ದರೂ ಹಠ ಮಾಡುತ್ತಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತವಾಗಿದೆ.

ಸಾರಿಗೆ ಸಂಸ್ಥೆ ನೌಕರರಿಗೆ ಸರಕಾರಿ ನೌಕರರಿಗಿಂತಲೂ ಹೆಚ್ಚಿನ ಸವಲತ್ತುಗಳನ್ನು ನೀಡುತ್ತಿದ್ದು, ಈ ಸಂಬಂಧ ಕೆಎಸ್ಆರ್‌ಟಿಸಿ ಪಟ್ಟಿ ಬಿಡುಗಡೆ ಮಾಡಿತ್ತು. ಈ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣದಲ್ಲಿ ಸಾರಿಗೆ ನೌಕರರ ವಿರುದ್ಧ ನೆಟ್ಟಿಗರು ಕಿಡಿಕಾರುತ್ತಿದ್ದಾರೆ. ಸಾರ್ವಜನಿಕರ ಪ್ರಯಾಣಕ್ಕೆ ಅಡಚಣೆಯಾದ್ದರಿಂದ ಹೋರಾಟ ಮಾಡುತ್ತಿರುವುದು ತಪ್ಪು ಎಂಬ ಕೂಗು ಕೇಳಿ ಬಂದಿದೆ.

ಮನೆ ಬಾಡಿಗೆ ಭತ್ಯೆ, ತುಟ್ಟಿಭತ್ಯೆ, ನಗರ ಪರಿಹಾರ ಭತ್ಯೆ, ರಜೆ ಸೌಲಭ್ಯ, ಪ್ರಯಾಣ ಭತ್ಯೆ, ಶವಸಂಸ್ಕಾರ, ಅನುಕಂಪದ ನೌಕರಿ ಸೌಕರ್ಯಗಳನ್ನು ಸರಕಾರಿ ನೌಕರರಂತೆಯೇ ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. ಸರಕಾರಿ ವಾಹನ ಚಾಲಕರಿಗೆ ಸಮವಸ್ತ್ರಕ್ಕೆ ತಿಂಗಳಿಗೆ 400 ರು. ನೀಡಲಾಗುತ್ತದೆ. ಸಾರಿಗೆ ನೌಕರರಿಗೆ ವರ್ಷಕ್ಕೆ ಎರಡು ಜತೆ ಸಮವಸ್ತ್ರ 175 ರು. ಹೊಲಿಗೆ ಭತ್ಯೆ ಮತ್ತು ಅವುಗಳನ್ನು ಸ್ವಚ್ಛಗೊಳಿಸಲು ತಿಂಗಳಿಗೆ 35 ರು. ನೀಡಲಾಗುತ್ತಿದೆ. ಬೆಚ್ಚನೆಯ ಉಡುಪು ಭತ್ಯೆಯಾಗಿ ಸರಕಾರಿ ನೌಕರರಿಗೆ ಎರಡು ವರ್ಷಗಳಿಗೊಮ್ಮೆ 3,600 ರಿಂದ 5 ಸಾವಿರ ರು. ನೀಡಲಾಗುತ್ತಿದೆ. ಸಾರಿಗೆ ನೌಕರರಿಗೆ ನಾಲ್ಕು ವರ್ಷಗಳಿಗೊಮ್ಮೆ ಜರ್ಸಿ ಮತ್ತು ಮಳೆ ಕೋಟು ಖರೀದಿಗೆ 600 ರು. ನೀಡಲಾಗುತ್ತಿದೆ.

ಸರಕಾರಿ ನೌಕರರಿಗೆ ಹಬ್ಬದ ಮುಂಗಡವಾಗಿ ವರ್ಷಕ್ಕೆ 10 ಸಾವಿರ ರು. ನೀಡುತ್ತಿದ್ದರೆ, ಸಾರಿಗೆ ನೌಕರರಿಗೆ 5 ಸಾವಿರ ರು. ನೀಡಲಾಗುತ್ತಿದೆ.

ಸ್ವಯಂ ನಿವೃತ್ತಿ ಪಡೆಯುವ ಸರಕಾರಿ ನೌಕರರಿಗೆ ಯಾವುದೇ ಹೆಚ್ಚುವರಿ ಆರ್ಥಿಕ ಸೌಲಭ್ಯ ಇರುವುದಿಲ್ಲ.

→ 11

### ಹೆಚ್ಚುವರಿ ಸೌಲಭ್ಯಗಳೇನು?

- 21 ಸಾವಿರ ರು. ವೇತನ ಇದ್ದರೆ 7 ಸಾವಿರ ರು. ಬೋನಸ್
- ಕೆಲಸಕ್ಕೆ ಬಂದು ಹೋಗಲು ಉಚಿತ ಪಾಸ್
- ವೇಗದೂತ ಬಸ್‌ಗಳಲ್ಲಿ ಕುಟುಂಬಕ್ಕೆ ಉಚಿತ ಟ್ರಿಪ್
- ನೌಕರರ ಮಕ್ಕಳಿಗೆ ಶಾಲಾ-ಕಾಲೇಜುಗಳಿಗೆ ತೆರಳಲು ಪಾಸ್
- ನಿವೃತ್ತ ಅಧಿಕಾರಿ ಪರಿ, ಪತ್ನಿಗೆ ಬಸ್‌ಗಳಲ್ಲಿ ಶೇ.50 ರಷ್ಟು ರಿಯಾಯಿತಿ.
- ಸಾರಿಗೆ ಆದಾಯ, ಹಾಜರಾತಿ ಮೇಲೆ ಪ್ರೋತ್ಸಾಹಧನ
- ಗೃಹ ಸಾಲದ ಮೇಲೆ 5 ಲಕ್ಷದವರೆಗೆ ಶೇ.4 ರಷ್ಟು ಬಡ್ಡಿ ಸಹಾಯಧನ
- ಹೆಚ್ಚುವರಿ ಸೇವೆಗೆ ಹೆಚ್ಚುವರಿ ವೇತನ
- ಮೃತರ ನಾಮಿನಿದಾರರಿಗೆ ಗರಿಷ್ಠ 6 ಲಕ್ಷ ವಿಮಾ ಪರಿಹಾರ

# ಹೆಚ್ಚುವರಿ ಸೌಲಭ್ಯವಿದ್ದರೂ ಸಾರಥಿಗಳ ಹಠವೇಕೆ?

[illegible]

ವೈದ್ಯಕೀಯವಾಗಿ ಅಸಮರ್ಥರಾಗಿರುವ ಸಾರಿಗೆ ನೌಕರರು ಸ್ವಯಂ ನಿವೃತ್ತಿ ಬಯಸಿದರೆ 6 ಲಕ್ಷ ಹೆಚ್ಚುವರಿ ಆರ್ಥಿಕ ನೆರವು, ವಿಶೇಷ ಪ್ರಕರಣಗಳಲ್ಲಿ 10 ಲಕ್ಷದ ತನಕ ನೀಡಲಾಗುತ್ತದೆ. ನಾಲ್ಕು ವರ್ಷಕ್ಕೊಮ್ಮೆ ಕುಟುಂಬ ಸಮೇತ 4 ಸಾವಿರ ಕಿಲೋ ಮೀಟರ್ ಪ್ರಯಾಣಿಸಲು ಪ್ರಯಾಣ ದರ ನೀಡಲಾಗುತ್ತಿದೆ. 2006ರ ನಂತರ ಸರಕಾರಿ ಸೇವೆಗೆ ಸೇರಿದವರು ನಿವೃತ್ತಿ ವೇತನದ ಬದಲು ಎನ್‌ಪಿಎಸ್ ಯೋಜನೆಯಡಿ ಪಿಂಚಣಿ ಪಡೆಯುತ್ತಾರೆ. ಪಿಎಫ್ (ಭವಿಷ್ಯನಿಧಿ) ಸೌಲಭ್ಯ ಇರುವುದಿಲ್ಲ. ಸಾರಿಗೆ ನೌಕರರಿಗೆ ಪಿಎಫ್ ಸೌಲಭ್ಯ ಇದೆ. ಇದಕ್ಕೆ ನಿಗಮಗಳ ಕಡೆಯಿಂದ ಪಾವತಿಯಾಗುವ ಹಣದಲ್ಲಿ ಕಡಿತ ಮಾಡಿ ಪಿಂಚಣಿಗೆ ಪಾವತಿಸಲಾಗುತ್ತಿದೆ ಎಂದು ನಿಗಮ ವಿವರಿಸಿದೆ.

ಸರಕಾರಿ ನೌಕರರಿಗೆ ಇಲ್ಲದಿರುವ ಹೆಚ್ಚುವರಿ ಸೌಲಭ್ಯಗಳೆಂದರೆ ಬೋನಸ್, ಉಚಿತ ಬಸ್ ಪಾಸ್, ವರ್ಷಕ್ಕೊಮ್ಮೆ ಕುಟುಂಬ ಸಮೇತ ಪ್ರಯಾಣಿಸಲು ಉಚಿತ ಪಾಸ್, ನೌಕರರ ಮಕ್ಕಳು ಶಾಲೆ, ಕಾಲೇಜುಗಳಿಗೆ ತೆರಳಲು ಉಚಿತ ಪಾಸ್, ಸಾರಿಗೆ ಆದಾಯದಲ್ಲಿ ಶೇ 3 ರಷ್ಟು ಪ್ರೋತ್ಸಾಹ ಧನ, ಮನೆ ಕಟ್ಟಲು, ಖರೀದಿಸಲು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಡೆಯುವ 5 ಲಕ್ಷ ಸಾಲಕ್ಕೆ ಶೇ 4 ರಷ್ಟು ಬಡ್ಡಿ ಸಹಾಯ ಧನ, ವಾರ್ಷಿಕ ಗರಿಷ್ಠ 20 ಸಾವಿರ ರು. ಬಡ್ಡಿ ಸಹಾಯಧನ ಮತ್ತು ಸೇವಾವಧಿಯಲ್ಲಿ 1 ಲಕ್ಷ ರು. ಬಡ್ಡಿ ಸಹಾಯಧನ ನೀಡಲಾಗುತ್ತಿದೆ ಎಂದು ತಿಳಿಸಿದೆ.

# ಮುಷ್ಕರ ನಿಷೇಧಿಸಿದ ಸರಕಾರ

10/4/17

[illegible]

ಈ ನಡುವೆ ಮುಷ್ಕರವನ್ನು ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗುವಂತೆ ಸಿಎಂ ಸೇರಿದಂತೆ ಅನೇಕ ಮಂತ್ರಿಗಳು ಸಿಬ್ಬಂದಿಗೆ ಮನವಿ ಮಾಡಿಕೊಂಡರು. ಆದರೆ, ಮನವಿಗೆ ಬಗ್ಗದ ಸಾರಿಗೆ ಸಿಬ್ಬಂದಿ ಮುಷ್ಕರವನ್ನು ಮುಂದುವರಿಸುವ ಪ್ರತಿಜ್ಞೆ ಮಾಡಿದ್ದಾರೆ. ಆರನೇ ವೇತನ ಆಯೋಗದಡಿ ವೇತನ ಪರಿಷ್ಕರಣೆ ಮಾಡುವವರೆಗೆ ಹೋರಾಟ ನಡೆಸುವುದಾಗಿ ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ವೇತನ ತಡೆಹಿಡಿಯು ವುದು, ಕೆಲಸದಿಂದ ವಜಾಗೊಳಿಸುವಂತಹ ಕೆಲಸಕ್ಕೆ ಸರಕಾರ ಮುಂದಾದರೆ, ಅದರ ವಿರುದ್ಧ ಕಾನೂನು ಹೋರಾಟ ನಡೆಸುವ ಎಚ್ಚರಿಕೆಯನ್ನು ಹೋರಾಟಗಾರರು ನೀಡಿದ್ದಾರೆ.

**ಖಾಸಗಿ-ಕೆಎಸ್‌ಆರ್‌ಟಿಸಿ ಸಿಬ್ಬಂದಿ ಜಟಾಪಟಿ:** ಮೂರನೇ ದಿನದ ಮುಷ್ಕರದ ವೇಳೆ ಕೆಲವು ಕೆಎಸ್‌ಆರ್‌ಟಿಸಿ ಬಸ್‌ಗಳು ರಸ್ತೆಗಿಳಿದಿದ್ದು, ಇದರಿಂದ ಕೆರಳಿದ ಖಾಸಗಿ ಬಸ್ ಸಿಬ್ಬಂದಿ ಸರಕಾರಿ ಬಸ್ ಸಿಬ್ಬಂದಿ ಜತೆಗೆ ತಗಾದೆ ತೆಗೆದಿದ್ದಾರೆ. ನಮಗೆ ಬಸ್ ಅನ್ನು ಪ್ರಯಾಣಿಕರ ಅನು ಕೂಲಕ್ಕೆ ತಕ್ಕಂತೆ ಓಡಿಸಲು ಅನುಮತಿ ನೀಡಿದ್ದು, ಈಗ ಇದ್ದಕ್ಕಿದ್ದಂತೆ ಸರಕಾರಿ ಬಸ್ ರಸ್ತೆಗಿಳಿಯುತ್ತಿವೆ. ಐದು ಖಾಸಗಿ ಬಸ್ ತೆರಳಿದ ನಂತರ ವಷ್ಟೇ ಒಂದು ಸರಕಾರಿ ಬಸ್‌ಗೆ ಅನುಮತಿ ನೀಡಬೇಕು ಎಂದು ಸ್ಯಾಟ ಲೈಟ್ ಬಸ್ ನಿಲ್ದಾಣದ ಅಧಿಕಾರಿಗಳ ಜತೆಗೂ ಖಾಸಗಿ ಬಸ್‌ಗಳ ಸಿಬ್ಬಂದಿ ತಗಾದೆ ತೆಗೆದರು. ಈ ವೇಳೆ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಮತ್ತು ಖಾಸಗಿ ವಾಹನಗಳ ಸಿಬ್ಬಂದಿ ನಡುವೆ ವಾಗ್ವಾದ ನಡೆಯಿತು. ಇಂತ ಹದ್ದೇ ಘಟನೆ ಮೈಸೂರಿನಿಂದಲೂ ವರದಿಯಾಗಿದ್ದು, ಅಲ್ಲಲ್ಲಿ ಖಾಸಗಿ ಮತ್ತು ಸರಕಾರಿ ಬಸ್ ಸಿಬ್ಬಂದಿ ನಡುವಿನ ತಿಕ್ಕಾಟ ಮುಂದುವರಿದಿದೆ.

## ಏ. 12ಕ್ಕೆ ಕುಟುಂಬ ಸಮೇತ ಧರಣಿ

ಸರಕಾರ ಸಾರಿಗೆ ನೌಕರರ ಬೇಡಿಕೆ ಈಡೇರಿಕೆಗೆ ಬಗ್ಗದಿದ್ದರೆ ಏ.12ರಂದು ನೌಕರರು ತಮ್ಮ ಕುಟುಂಬ ಸಮೇತ ಪ್ರತಿಭಟನೆ ನಡೆಸಲು ಸಜ್ಜಾಗಿದ್ದಾರೆ. ಅಂದು ನೌಕರರ ಕುಟುಂಬಸ್ಥರು, ಆಯಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿ, ತಹಸೀಲ್ ಕಚೇರಿಗೆ ತಟ್ಟೆ ಲೋಟಾ ಬಡಿದುಕೊಂಡು ಹೋಗಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಿದ್ದಾರೆ. ಬೆಳಗಾವಿ, ಕಲಬುರಗಿ, ಸೇರಿದಂತೆ ವಿವಿಧ ವಿಭಾಗಗಳಲ್ಲಿ ಸಾರಿಗೆ ನೌಕರರ ಸಮಾವೇಶ ಕರೆದು, ಹೋರಾಟದ ಕುರಿತು ಚರ್ಚೆ ನಡೆಸಲಿದ್ದಾರೆ. ಯಾವುದೇ ಕಾರಣಕ್ಕೂ ಆರನೇ ವೇತನ ಆಯೋಗದಡಿ ವೇತನ ನೀಡುವ ತನಕ ಹೋರಾಟ ಕೈಬಿಡುವುದಿಲ್ಲ ಎಂಬ ಎಚ್ಚರಿಕೆಯನ್ನು ಸರಕಾರಕ್ಕೆ ರವಾನಿಸಿದ್ದಾರೆ.

ತೆಲಂಗಾಣ ಮಾದರಿಯಲ್ಲಿ ನಮ್ಮ ನೌಕರರನ್ನೂ ವಜಾ ಮಾಡೋದಿದ್ದರೆ ಮಾಡಲಿ. ಅದನ್ನೂ ನೋಡಿಕೊಳ್ಳುತ್ತೇವೆ. ಈವರೆಗೆ ಸರಕಾರ ಮಾತುಕತೆಗೆ ಕರೆದಿಲ್ಲ. ನಮ್ಮನ್ನ ಮಾತುಕತೆಗೆ ಕರೆದರೆ ಹೋಗುತ್ತೇವೆ. ನನ್ನನ್ನ ಮಾತುಕತೆಗೆ ಬರುವುದು ಬೇಡ ಎನ್ನುವುದಾದರೆ ಅದಕ್ಕೆ ಬಲವಾದ ಕಾರಣ ಕೊಡಲಿ. ಚಳವಳಿ ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದ್ದು ನಮ್ಮ ಹೋರಾಟ ನಿಲ್ಲುವುದಿಲ್ಲ.

**- ಕೋಡಿಹಳ್ಳಿ ಚಂದ್ರಶೇಖರ್**

ಸಾರಿಗೆ ನೌಕರರ ಒಕ್ಕೂಟದ ಗೌರವಾಧ್ಯಕ್ಷ.